ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

2

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ - ಸದನ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯ ಕಾಲ ದಿನಾಂಕ : DATE 7/1/2021

# ಸದನ ಸಮಿತಿಯಿಂದ ಸಿದ್ದರಾಮಯ್ಯ, ಎಚ್ಡಿಕೆಗೆ ನೋಟಿಸ್: ಎಚ್.ವಿಶ್ವನಾಥ್

ಬೆಂಗಳೂರು: ಉಪ ಸಭಾಪತಿ ಧರ್ಮೇಗೌಡರ ಸಾವಿನ ಬಗ್ಗೆ ರಾಜಕೀಯ ಹೇಳಿಕೆಗಳನ್ನು ನೀಡುತ್ತಿರುವ ಮಾಜಿ ಸಿಎಂಗಳಾದ ಸಿದ್ದರಾಮಯ್ಯ ಹಾಗೂ ಎಚ್.ಡಿ. ಕುಮಾರಸ್ವಾಮಿಗೆ ಸದನ ಸಮಿತಿಯಿಂದ ನೋಟಿಸ್ ನೀಡಲಾಗುವುದು ಎಂದು ಸದನ ಸಮಿತಿ ಸದಸ್ಯ ಎಚ್.ವಿಶ್ವನಾಥ್ ಹೇಳಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿ, ಧರ್ಮೇಗೌಡರ ಸಾವಿನ ಪ್ರಕರಣದ ವಿಚಾರದಲ್ಲಿ ಸಿದ್ದರಾಮಯ್ಯ, ಕುಮಾರಸ್ವಾಮಿ ಮಾತನಾಡುವುದು ಸರಿಯಲ್ಲ. ರಾಜ್ಯ ತಲೆ ತಗ್ಗಿಸುವ ಘಟನೆ ಡಿಸೆಂಬರ್ 15 ರಂದು ನಡೆದಿದೆ. ರಾಜಕೀಯ ಲಾಭ ಪಡೆಯಲು ಕುಮಾರಸ್ವಾಮಿ, ಸಿದ್ದರಾಮಯ್ಯ ಮಾತನಾಡುವುದು ಒಳ್ಳೆಯದಲ್ಲ. ಅವರ ಕುಟುಂಬ, ಬೆಂಬಲಿಗರಿಗೆ ತೊಂದರೆ ಮಾಡುವುದು ಬೇಡ. ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿ, ಸಿದ್ದರಾಮಯ್ಯ ಎರಡು ಬಾರಿ ಡಿಸಿಎಂ ಒಮ್ಮೆ ಸಿಎಂ ಆಗಿದ್ದಾರೆ. ಬಫೂನ್ ರೀತಿ ಮಾತನಾಡಬೇಡಿ ಜನರು ನಗುತ್ತಿದ್ದಾರೆ ಎಂದರು.